ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

# ಸೊಲ್ಲು-೩

ಬಿ.ಎ. ತೃತೀಯ ಸೆಮಿಸ್ಟರ್ ಕನ್ನಡ ಐಚ್ಛಿಕ ಪಠ್ಯಪುಸ್ತಕ

(೨೦೧೮-೧೯, ೨೦೧೯-೨೦, ೨೦೨೦-೨೧ನೇ ಶೈಕ್ಷಣಿಕ ವರ್ಷಗಳಿಗಾಗಿ)


**ಪ್ರಧಾನ ಸಂಪಾದಕರು**

ಪ್ರೊ. ಮಹೇಶ ಚಿಂತಾಮಣಿ

**ಕಾರ್ಯನಿರ್ವಾಹಕ ಸಂಪಾದಕರು**

ಡಾ. ಮೀನಾಕ್ಷಿ ಬಾಳಿ

**ಸಂಪಾದಕರು**

ಶ್ರೀಮತಿ ಪುಷ್ಪಾವತಿ ಶಲವಡಿಮಠ

ಡಾ. ಬಸಮ್ಮ ಗಂಗನಳ್ಳಿ



ಪ್ರಸಾರಾಂಗ

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ

ವಿಜಯಪುರ

## **ಪರಿವಿಡಿ**

**ಘಟಕ –೧**

**೧. ವಚನಗಳು**

೧. ಜೇಡರ ದಾಸಿಮಯ್ಯ
೨. ಬಸವಣ್ಣ
೩. ಉರಿಲಿಂಗ ಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ
೪. ಸತ್ಯಕ್ಕ

**೨. ರಗಳೆ**

೧. ಮಲುಹಣನ ರಗಳೆ (ಆಯ್ದ ಭಾಗ) – ಹರಿಹರ

**೩. ಷಟ್ಪದಿ**

೧. ರಾಮಧಾನ್ಯ ಚರಿತೆ (ಆಯ್ದ ಭಾಗ) ಕನಕದಾಸ

**೪. ಕೀರ್ತನೆಗಳು**

೧. ಅಸೂಯೆ ಬಿಡಿಸೆನ್ನ ಮನಸಿನ – ಶ್ರೀ ರಾಮದಾಸ
೨. ಇದ್ದರಿರಬೇಕು ಸಂಸಾರ ಸುಖದಲ್ಲೀಗೆ – ಕಾಖಂಡಕಿ ಮಹಿಪತಿದಾಸ
೩. ಅಕ್ಕರವುಳ್ಳ ನಮ್ಮಕ್ಕ ರುಕ್ಮಿಣಿ ಕೇಳೆ– ಹರಪನಹಳ್ಳಿ ಭೀಮವ್ವ
೪. ಕಂಡೆನೀಗ ರಂಗನಾಥನ – ಹೆಳವನಕಟ್ಟೆ ಗಿರಿಯಮ್ಮ

**೫. ಸಾಂಗತ್ಯ**

೧. ಸೊಬಗಿನಸೋನೆ (ಆಯ್ದ ಭಾಗ) - ದೇಪರಾಜ

**೬. ತತ್ವ ಪದಗಳು:**

೧. ಬಯಲು ಭ್ರಾಂತು – ಮುಪ್ಪಿನ ಷಡಕ್ಷರಿ
೨. ಮಗನೊಂದ ಹಡೆದೆನಲ್ಲ – ಬಿದನೂರು ಗಂಗಮ್ಮ

**ಘಟಕ–೨ ಲೇಖನಗಳ ಭಾಗ**

೧. ಮಧ್ಯಕಾಲೀನ ಸಾಹಿತ್ಯ : ಹಿನ್ನೆಲೆ, ಪ್ರೇರಣೆ ಮತ್ತು ಇತಿಹಾಸ– ಡಾ.ಜಿ.ಎಸ್.ಶಿವರುದ್ರಪ್ಪ
೨. ವಚನ ಸಾಹಿತ್ಯದ ಆಶಯ, ವಿನ್ಯಾಸ ಪ್ರಭಾವ–ಡಾ.ವಾಯ್.ಎಂ.ಯಾಕೊಳ್ಳಿ
೩. ಭಕ್ತಿ ಸಾಹಿತ್ಯದ ವಿವಿಧ ಆಯಾಮಗಳು – ಡಾ.ವಿಜಯಕುಮಾರ ಕಟಗಿಹಳ್ಳಿಮಠ
೪. ನಡುಗನ್ನಡ ಸಾಹಿತ್ಯ ಮತ್ತು ಮಹಿಳೆ – ಡಾ.ಸಬಿತಾ ಬನ್ನಾಡಿ
೫. ಮಧ್ಯಕಾಲೀನ ಸಾಹಿತ್ಯ : ಓದು ಕ್ರಮಗಳು – ಡಾ.ಎಂ.ಜಿ.ಹೆಗಡೆ

# ೧. ವಚನಗಳು

## ೧.ಜೇಡರ ದಾಸಿಮಯ್ಯ

೧.

ಒಡಲುಗೊಂಡವ ಹಸಿವ; ಒಡಲುಗೊಂಡವ ಹುಸಿವ
ಒಡಲುಗೊಂಡವನೆಂದು
ನೀನೆನ್ನ ಜಡಿದೊಮ್ಮೆ ನುಡಿಯದಿರ!
ನೀನೆನ್ನಂತೆ ಒಮ್ಮೆ ಒಡಲುಗೊಂಡು ನೋಡ! ರಾಮನಾಥ.

೨.

ಒಡಲುಗೊಂಡೆನಾಗಿ ಮೃಡ! ನಿಮಗೆ ಹಗೆಯಾದೆನಯ್ಯ.
ಆನು ಒಡಲುಗೊಂಡಡೇನು?
ಕಡಲೊಳಗಣ ಬೊಬ್ಬುಳಿಕೆ ಕಡಲೊಳಗೆ ಅಳಿವಂತೆ
ಎನ್ನ ಒಡಲಳಿದು ಹೋದಡೇನು?
ಪ್ರಾಣ ನಿಮ್ಮ ಎಡೆಯಲಡಗುವದಯ್ಯಾ, ರಾಮನಾಥ.

೩.

ಒಡಲೊಳಗಣ ಕಿಚ್ಚು ಒಡಲ ಸುಡದ ಭೇದವ
ಕುಡಿದ ಉದಕದಲ್ಲಿ ಆ ಕಿಚ್ಚು ನಂದದ ಭೇದವ
ಮೃಡ! ನೀ ಪ್ರಾಣ ಪ್ರಕೃತಿಯೊಳಗೆ ಅಡಗಿದ ಭೇದವ
ಲೋಕದ ಜಡರೆತ್ತ ಬಲ್ಲರೈ? ರಾಮನಾಥ.

೪.

ಕಡುಭಸಿತವ ಹೂಸಿ,
ಮುಡಿಯಲ್ಲಿ ಲಿಂಗವ ಧರಿಸಿ,
ಮಂತ್ರಮೂರ್ತಿಯ ಮನವಾರೆ ಪೂಜಿಸಿ,
ಭಕ್ತಿ ವೇಷವ ಹೊತ್ತು ಭಕ್ತನೆನಿಸಿದ ಬಳಿಕ
ಭವಿಯ ಮನೆಯನ್ನವ
ನಾಯಡಗು, ನರರು ಹೇಸಿದ ಅಮೇಧ್ಯವೆಂದೆ ಕಾಣಬೇಕು.
ಹೀಗಲ್ಲದೆ ಒಡಲಿಚ್ಚೆಗೆ ತುಡುಗಣಿ ನಾಯಂತೆ
ಒಡಲ ಹೊರೆವವರ ಮೆಚ್ಚ, ನಮ್ಮ ರಾಮನಾಥ.

೫.

ಕಡೆಗೀಲಿಲ್ಲದ ಬಂಡಿ ಹೊಡೆಗೆಡೆಯದೆ ಮಾಬ್ಬುದೆ?

ಕಡೆಗೀಲು ಬಂಡಿಗಾಧಾರ.

ಕಡುದರ್ಪವೇರಿದ ಒಡಲೆಂಬ ಬಂಡಿಗೆ

ಮೃಢಭಕ್ತರ ನುಡಿಗಡಣವೆ ಕಡೆಗೀಲು ಕಾಣಾ! ರಾಮನಾಥ.

## ೧. ಜೇಡರ ದಾಸಿಮಯ್ಯನ ಪರಿಚಯ :

ಜೇಡರ ದಾಸಿಮಯ್ಯನನ್ನು ಆದ್ಯವಚನಕಾರನೆಂದು ಗುರುತಿಸಲಾಗಿದೆ. ಇವನು ಬಸವಣ್ಣನವರಿಗಿಂತ ಸುಮಾರು ಇಪ್ಪತ್ತು ವರ್ಷ ಮುಂಚಿತವಾಗಿ ಬದುಕಿದ್ದವನು. ಯಾದಗಿರಿ ಜಿಲ್ಲೆಯ ಯಾದಗಿರಿ ತಾಲೂಕಿನ ಮುದನೂರು ಎಂಬ ಊರಿನವನು. ಮುದನೂರಿನ 'ರಾಮನಾಥ'ನ ಪರಮಭಕ್ತನಿವನು. ಈ ಕಾರಣದಿಂದಲೇ ತನ್ನ ವಚನಗಳ ಅಂಕಿತವನ್ನು 'ರಾಮನಾಥ' ಎಂದು ಇಟ್ಟುಕೊಂಡಿದ್ದಾನೆ. ಕರ್ನಾಟಕ ಸರ್ಕಾರ ಹೊರತಂದಿರುವ 'ಸಮಗ್ರ ವಚನ ಸಂಪುಟ–ಭಾಗ–೨' ರಲ್ಲಿ ಜೇಡರ ದಾಸಿಮಯ್ಯ ಬರೆದಿರುವ ೧೭೬ ವಚನಗಳನ್ನು ಪ್ರಕಟಿಸಿದೆ. ಜೇಡರ ದಾಸಿಮಯ್ಯನು ತನ್ನ ವಚನವೊಂದರಲ್ಲಿ ಉಂಕೆ, ಸರಿಗೆ, ಅಣಿಯೇಳು, ಲಾಳಿಯ ಮುಳ್ಳು ಮುಂತಾದ ವೃತ್ತಿಸಂಬಂಧಿತ ಪದಗಳನ್ನು ಬಳಸಿರುವುದನ್ನು ನೋಡಿದರೆ ಇವನು ವೃತ್ತಿಯಲ್ಲಿ 'ನೇಯ್ಗೆವನು' ಎಂಬುದನ್ನು ದೃಢಪಡಿಸಲಾಗಿದೆ. ಜೇಡರ ದಾಸಿಮಯ್ಯನ ಹೆಂಡತಿಯ ಹೆಸರು 'ದುಗ್ಗಳೆ' ಇವಳನ್ನು 'ಸುಗ್ಗಲೆ' ಎಂದೂ ಕೆಲವೆಡೆ ಕರೆಯಲಾಗಿದೆ. ದಾಸ, ದಾಸಿದೇವ, ದಾಸಯ್ಯ, ದಾಸಿಮಯ್ಯ, ಜೇಡರ ದಾಸಿಮಯ್ಯ, ದೇವರ ದಾಸಿಮಯ್ಯ ಎಂಬ ಹೆಸರುಗಳಿಂದಲೂ ಇತನು ಗುರುತಿಸಿಕೊಂಡಿದ್ದಾನೆ. ಬಸವಣ್ಣನವರು ದಾಸಿಮಯ್ಯ - ದುಗ್ಗಳೆಯರ ಅನುಪಮ ಈ ದಾಂಪತ್ಯವನ್ನು ಕೊಂಡಾಡುತ್ತ 'ಸತಿಪತಿಗಳೊಂದಾದ ಭಕ್ತಿ ಹಿತವಪ್ಪುವುದು ಶಿವಂಗೆ' ಎಂದಿದ್ದಾರೆ. ದಾಂಪತ್ಯ ಜೀವನವನ್ನು ಪುರಸ್ಕರಿದಾತ ಜೇಡರ ದಾಸಿಮಯ್ಯ. ಮೊಟ್ಟ ಮೊದಲಿಗೆ 'ಸ್ತ್ರೀತ್ವ' ಕ್ಕೆ ಗೌರವವನ್ನು ಕೊಟ್ಟವನು. ಜೈವಿಕ ನೆಲೆಯಲ್ಲಿ ಸ್ತ್ರೀ–ಪುರುಷರಿಗೆ ಭಿನ್ನತೆಗಳಿದ್ದರೂ, ಆತ್ಮಜ್ಞಾನ, ಪ್ರತಿಭೆಗಳಲ್ಲಿ ಇಬ್ಬರೂ ಸಮಾನರು, ಪ್ರಕೃತಿಗೆ ಇಬ್ಬರೂ ಪೂರಕರು ಎಂಬುದನ್ನು ಜೇಡರ ದಾಸಿಮಯ್ಯ ವಿಶಾಲ ನೆಲೆಯಲ್ಲಿ ವಿಶ್ಲೇಷಿಸಿದ್ದಾನೆ. ಬಂಡಾಯ ವಚನಕಾರನೆನಿಸಿದ ಇವನು, ರಾಜಶಾಹಿ, ಪುರೋಹಿತಶಾಹಿಯ ಮತ್ತು ಪ್ರಭುತ್ವದ ಕಟುಧೋರಣೆಗಳನ್ನು ನಿರಾಕರಿಸಿದವನು. ಆಡುಭಾಷೆಗೆ ಸಾಹಿತ್ಯದ ನೆಲೆಯನ್ನು ಒದಗಿಸಿದಾತನಿವನು. ಸ್ವಾಭಿಮಾನ, ಕಾಯಕನಿಷ್ಠೆ, ವೀರಶೈವ ನಿಷ್ಠೆ, ನಿಷ್ಠುರತೆ, ಸಂಕ್ಷಿಪ್ತತೆ, ಸರಳತೆ, ಅರ್ಥಗರ್ಭಿತತೆ, ಸಾಹಿತ್ಯಿಕ ಗುಣಗಳಿಂದಾಗಿ ಇವನ ವಚನಗಳು ವಿಶಿಷ್ಟತೆ ಪಡೆದುಕೊಂಡಿವೆ.

ದಾಸಿಮಯ್ಯನ ವಚನಗಳಲ್ಲಿ ವೈಚಾರಿಕತೆಯ ನಿಲುವುಗಳಿರುವಂತೆ, ಅವನ ಅಭಿವ್ಯಕ್ತಿಯಕ್ರಮದಲ್ಲಿಯೂ ವಿನೂತನತೆಯಿದೆ. ಶ್ರೇಷ್ಠ ಚಿಂತಕನೂ, ಅನುಭಾವಿಯೂ ಆದ ದಾಸಿಮಯ್ಯ ವರ್ಣಾಶ್ರಮಧರ್ಮ ಪದ್ಧತಿಯನ್ನು ಟೀಕಿಸಿದವನು. ವಾಸ್ತವಿಕ ನೆಲೆಯಲ್ಲಿ ಬದುಕನ್ನು ಕಂಡುಕೊಂಡು ಬದುಕಿನ ಸಂಕೀರ್ಣತೆಯನ್ನು, ವೈವಿಧ್ಯತೆಯನ್ನು ಅನುಭವದ ಕಣ್ಣಿನಿಂದ ದರ್ಶಿಸಿ, ಅದರ ಸೂಕ್ಷ್ಮತೆಗಳನ್ನು ಸರಳವಾಗಿ ತನ್ನ ವಚನದಲ್ಲಿ ದರ್ಶಿಸಿದವನು. ಹೀಗಾಗಿ ಇವನ ವಚನಗಳು ಕನ್ನಡ ಸಾರಸ್ವತ ಲೋಕದಲ್ಲಿ ಮಿನುಗುವ ನಕ್ಷತ್ರಗಳಾಗಿವೆ. ಸಮಾಜ ಸುಧಾರಣೆಗೆ ಕ್ಷ–ಕಿರಣಗಳಾಗಿವೆ.

### ವಚನಗಳ ಆಶಯ:

ವಚನಕಾರರೆಂದೂ 'ದೇಹ'ವನ್ನು ತುಚ್ಛವಾಗಿ ಕಂಡವರಲ್ಲ. ಆತ್ಮಕ್ಕೆ ಎಷ್ಟು ಪ್ರಾಮುಖ್ಯತೆ ಇದೆಯೋ ಅಷ್ಟೇ ಪ್ರಾಮುಖ್ಯತೆ 'ದೇಹ'ಕ್ಕೂ ಇದೆ ಎಂದು ಪ್ರತಿಪಾದಿಸಿದವರು. "ದೇಹವೇ ದೇವಾಲಯವಾಗಿರಲು ಮತ್ತೊಂದು ದೇವಾಲಯವೇಕೆ?" ಎಂದು ಸ್ವತಃ ಅಲ್ಲಮ ಪ್ರಭುಗಳು ಹೇಳಿದರೆ, 'ದೇಹವೇ ದೇಗುಲ' ಎಂದು ಬಸವಣ್ಣನವರು ನುಡಿದರು. ದೇಹಕ್ಕೆ ದೇವಾಲಯದ ಪರಿಕಲ್ಪನೆ ನೀಡಿ,

ಅಂತರಂಗ ಬಹಿರಂಗ ಶುದ್ಧಿಗೆ ವಚನಕಾರರು ಆದ್ಯತೆ ನೀಡಿದರು. ದೇಹವಿದ್ದರೆ ಕಾಯಕ, ದಾಸೋಹ ಮಾಡಲು ಸಾಧ್ಯ. ಕಾಯವಿಕಾರ ಕಳೆದರೆ ಕಾಯವೂ ಶ್ರೇಷ್ಠವೇ ಎಂಬ ಉದಾತ್ತ ನಿಲುವು ಇವರದು. ಅಂತೆಯೇ ಜೇಡರ ದಾಸಿಮಯ್ಯನು, ದೇಹವನ್ನು, ಕಾಯವನ್ನು 'ಒಡಲು' ಎಂದು ಸಂಬೋಧಿಸಿ, ಒಡಲುಗೊಂಡ ಮಾನವ ಕನಿಷ್ಠನಲ್ಲ, ಎನ್ನುತ್ತಾ 'ದೇವ', 'ಮಾನವ' ಎಂಬ ಶಬ್ಧದ ತಾರತಮ್ಯತೆಯನ್ನು ನಿರಾಕರಿಸುತ್ತಾನೆ. ಕಾಯದ ಕಷ್ಟ ನಿಭಾಯಿಸಿ, ಭವಬಂಧನದಲ್ಲಿ ಸಿಲುಕಿ, ಬದುಕು ಸಾಗಿಸುವುದು ಕಷ್ಟತಮವಾದದ್ದು. ಹಸಿವು, ನಿದ್ರೆ, ತೃಷೆ, ಕಾಮಾದಿಗಳ ಜೊತೆಗಿದ್ದು ಕಾಯದೊಂದಿಗೆ ಕಾಯಕ ಮಾಡುತ್ತಾ ಬದುಕನ್ನು ಕಟ್ಟಿಕೊಳ್ಳುವುದು ಕಷ್ಟದ ಕೆಲಸ 'ನೀನೆನ್ನಂತೆ ಒಡಲುಗೊಂಡು ನೋಡಾ' ಎಂಬ ಸಾಲಿನಲ್ಲಿ ದೇವರಿಗೆ ಈ ರೀತಿ ಜೇಡರ ದಾಸಿಮಯ್ಯ ಸವಾಲು ಹಾಕುವುದರೊಂದಿಗೆ 'ಕಾಯಕಷ್ಟ'ದ ಬವಣೆಗಳನ್ನು ಹೇಳುತ್ತಾನೆ.

'ಒಡಲು ಅಳಿದರು ಒಡೆದರು, ನಿನ್ನೊಡಲಲ್ಲಿ ಪ್ರಾಣ ನಿಲ್ಲುವುದಯ್ಯಾ ರಾಮನಾಥ' ಎಂದು ಹೇಳುವಲ್ಲಿ, ಮಾನವತ್ವ, ದೈವತ್ವದ ವಿಲೀನಿಕರಣದ ವಿಚಾರವನ್ನು ಪ್ರಸ್ತುತಪಡಿಸುತ್ತಾನೆ. ವೈಜ್ಞಾನಿಕ ನಿಲುವಿನ ದಾಸಿಮಯ್ಯ, ತನ್ನ ತತ್ವ ವಿಚಾರಗಳಿಗೆ ವೈಚಾರಿಕತೆಯ ತೊಡುಗೆಯನ್ನು ತೊಡಿಸಿದಾತ. ಒಡಲೊಳಗೆ ಕಿಚ್ಚು (ಕಾವು) ಇದೆ, ಆದರೂ ಅದು ದೇಹವನ್ನು ಸುಡುವುದಿಲ್ಲ. ಕುಡಿದ ನೀರು ಆ ಕಿಚ್ಚನ್ನು ನಂದಿಸುವುದಿಲ್ಲ. ಅತೀಂದ್ರಿಯ ಶಕ್ತಿಯೊಂದು ಪ್ರಾಣ, ಪ್ರಕೃತಿಯಲ್ಲಿಡಗಿದ ಭೇದವನ್ನು ಸಾಮಾನ್ಯರು ಅರ್ಥೈಸಿಕೊಳ್ಳಲು ಹೇಗೆ ಸಾಧ್ಯ? ಎಂದು ಕ್ರಿಯಾಜ್ಞಾನವನ್ನು ದಾಸಿಮಯ್ಯ ಹುಟ್ಟು ಹಾಕುತ್ತಾನೆ.

ಕಾಯವಿಕಾರವನ್ನು ತೊರೆದು ಬದುಕಿದರೆ, ಮಾತ್ರ ಕಾಯಕ್ಕೆ ಬೆಲೆ. ಒಡಲ ಇಚ್ಛೆಗೆ 'ಭಕ್ತ'ನಲ್ಲದವನ ಮನೆಯಲ್ಲಿ ಪ್ರಸಾದ ಸೇವಿಸಿದರೆ, ಅಂತವನು 'ತುಡುಗುಣಿ ನಾಯಿ'ಯಂತೆ ಎಂದು ದಾಸಿಮಯ್ಯ ಟೀಕಿಸುತ್ತಾನೆ. ಕಡುದರ್ಪವೇರಿದ ಬಂಡಿ ಒಂದಿಲ್ಲಾ ಒಂದು ದಿನ ಹೊಡಮರಳಿ ಬೀಳುವುದು. ದೇಹಕ್ಕೆ 'ದರ್ಪ'ವೆಂಬುದು ಅಪಾಯಕಾರಿಯಾದುದು. ಕೀಲು ಇಲ್ಲದ ಬಂಡಿ ಹೇಗೆ ಉರುಳಿ ಬೀಳುವುದೋ, ಹಾಗೆ 'ಕಡುದರ್ಪ'ದಿಂದ ಕೂಡಿದ ಬಂಡಿಗೆ ಮೃಡಶರಣರ ಮಾತುಗಳು ಕೀಲಿನಂತೆ, ಕೆಲಸ ಮಾಡುತ್ತವೆ. 'ಮೃಡಶರಣ'ರ ಅನುಭಾವವಿಲ್ಲದಿದ್ದರೇ ಒಡಲೆಂಬ ಬಂಡಿ ಬಿದ್ದು ಹೋಗುತ್ತದೆ.

'ಒಡಲು' ಭೂಮಿಯ ಬದುಕನ್ನು ಸುಂದರಗೊಳಿಸುವ ಸಾಧನ. ಅದನ್ನು ಹಸನಾಗಿಟ್ಟುಕೊಳ್ಳಬೇಕು, ಎಂಬುದು ದಾಸಿಮಯ್ಯನ ವಚನಗಳ ಆಶಯ. ವ್ಯಕ್ತಿತ್ವ ವಿಕಸನಕ್ಕೆ ದೇಹ ಮತ್ತು ಆತ್ಮ ಎರಡೂ ಒಳಗಾಗಬೇಕು, ಎಂಬುದು ಈ ವಚನಗಳ ಮುಖ್ಯ ಆಶಯ.

**ಹೆಚ್ಚಿನ ಓದಿಗಾಗಿ :**


೧) ಬಸವಯುಗದ ವಚನ ಮಹಾಸಂಪುಟ–೧ ಪ್ರಧಾನ ಸಂಪಾದಕರು: ಡಾ.ಎಂ.ಎಂ.ಕಲಬುರ್ಗಿ

೨) ಸಾಮಾನ್ಯನಿಗಾಗಿ ಸಾಹಿತ್ಯ ಚರಿತ್ರೆ : ವಚನಸಾಹಿತ್ಯ ಡಾ.ಎಂ ಚಿದಾನಂದಮೂರ್ತಿ

೩) ಕನ್ನಡ ಸಾಹಿತ್ಯ ಚರಿತ್ರೆ ಸಂಪುಟಗಳು : ಬೆಂಗಳೂರು ವಿಶ್ವವಿದ್ಯಾನಿಲಯ.

೪) ಕನ್ನಡ ಸಾಹಿತ್ಯ ಚರಿತ್ರೆ ಸಂಪುಟಗಳು : ಮೈಸೂರು ವಿಶ್ವವಿದ್ಯಾನಿಲಯ.